

**ಕೈಗೆಟುಕಿತು ಮಹತ್ವಾಕಾಂಕ್ಷೆಯ ಕ್ಯಾಂಡಿಡೇಟ್ಸ್ ಕಿರೀಟ, ಕೈಯಳತೆ ದೂರದಲ್ಲಿ ವಿಶ್ವ ಚಾಂಪಿಯನ್ ಮುಕುಟ**

ಏನು ಕಡಿಮೆಯಲ್ಲ. ಅನೇಕ ಪಂದ್ಯಾವಳಿಗಳಲ್ಲಿ ಎದುರಾಳಿಯ ಲೆಕ್ಕಾಚಾರಗಳನ್ನು ಬುಡಮೇಲು ಮಾಡಿದ ಅಗ್ಗಳಿಕೆ ಈ 17 ವರ್ಷದ ತರುಣನದು. ಈ ಇಬ್ಬರೂ ಕ್ಯಾಂಡಿಡೇಟ್ಸ್‌ನಲ್ಲಿ ಅಚ್ಚರಿ ಫಲಿತಾಂಶ ನೀಡಿಯಾರೆಂಬ ನಿರೀಕ್ಷೆ ಕೊನೆಗೂ ಹುಸಿಯಾಗಲಿಲ್ಲ. ಗುಕೇಶ್, ಮೊದಲ ಪ್ರಯತ್ನದಲ್ಲೇ ಕ್ಯಾಂಡಿಡೇಟ್ಸ್ ಕಿರೀಟವನ್ನೂ ಧರಿಸಿದರು. ಅಮೆರಿಕದ ದಂತಕಥೆ ಬಾಬಿ ಫಿಷರ್ ಹಾಗೂ ಚೆಸ್‌ನ ಅಗ್ರಮಾನ್ಯ ಆಟಗಾರ ಕಾರ್ಲ್‌ಸನ್ ಅಂಥವರಿಗೂ ಈ ಸಾಧನೆ ಸಾಧ್ಯವಾಗಿರಲಿಲ್ಲ.

'ಅತಿ ಕಿರಿಯ ವಯಸ್ಸಿನ ಕ್ಯಾಂಡಿಡೇಟ್ಸ್ ಚಾಂಪಿಯನ್' ಎಂಬ ದಾಖಲೆಯೂ ಈಗ ಗುಕೇಶ್ ಹೆಸರಿಗೆ ಸಂದಿದೆ. ಗ್ಯಾರಿ ಕ್ಯಾಸ್ಪರೋವ್ 1984ರಲ್ಲಿ ಚಾಂಪಿಯನ್ ಆದಾಗ ಅವರ ವಯಸ್ಸು 20. ಇದೇ ವರ್ಷದ ಕೊನೆಯಲ್ಲಿ ಡಿರೆನ್ ಲಿಂಗ್ ಎದುರಿನ ನಡೆಯುವ ವಿಶ್ವ ಚಾಂಪಿಯನ್‌ಶಿಪ್ ಪೋಟಿಯಲ್ಲೇನಾದರೂ ಗುಕೇಶ್ ವಿಜಯಿಯಾದರೆ, ಅತ್ಯಂತ ಕಿರಿಯ ವಿಶ್ವ ಚಾಂಪಿಯನ್ ಎನ್ನುವ ಹಿರಿಮೆಯೂ ಅವರದಾಗುತ್ತದೆ.

ಟೊರಾಂಟೊ ಟೂರ್ನಿಯಲ್ಲಿನ ಗುಕೇಶ್ ಸಾಧನೆಯನ್ನು ಗಮನಿಸಿ: ಆಡಿದ 14 ಪಂದ್ಯಗಳಲ್ಲಿ ಐದು ಗೆಲುವು, ಎಂಟು ಡ್ರಾ, ಒಂದು ಸೋಲು. ಈ ಹಿಂದಿನ ಎರಡು ಟೂರ್ನಿಗಳ ವಿಜೇತ ನೆಪೊಮ್‌ನಿಷಿ ಟೂರ್ನಿಯುದ್ದಕ್ಕೂ ಅಜೇಯರಾಗುಳಿದರೂ ಮತ್ತು ಬಹುಪಾಲು ಏಕಾಂಗಿ ಮತ್ತು ಜಂಟಿ ಅಗ್ರಸ್ಥಾನದಲ್ಲಿದ್ದರೂ ಕೊನೆಗೆ ಚಾಂಪಿಯನ್ ಪಟ್ಟವನ್ನು ಗುಕೇಶ್‌ಗೆ ಬಿಟ್ಟುಕೊಡಬೇಕಾಯಿತು.

### ಸಾಧನೆಯ ಹಿಂದಿವೆ ಹಲವು ಕಾರಣ

ಗುಕೇಶ್ ಅವರ ಗೆಲುವಿಗೆ ಹಲವು ಕಾರಣಗಳನ್ನು ನೀಡಲಾಗುತ್ತಿದೆ. ಸಣ್ಣ ವಯಸ್ಸಿನಲ್ಲೂ ಗಟ್ಟಿ ಮನೋಬಲ, ಸಾಕಷ್ಟು ಸಿದ್ಧತೆ, ಕ್ಲಿಷ್ಟಕರ ಸನ್ನಿವೇಶದಲ್ಲೂ ಆಟ ಯಾವ ಹಾದಿಗೆ ಸಾಗಬಹುದು ಎಂಬ ಗ್ರಹಿಕೆ, ಒತ್ತಡದಲ್ಲೂ

**ಹದಿನೇಳು ವರ್ಷದ ಭಾರತದ ಗುಕೇಶ್ ಹಾಗೂ ಮೂವತ್ತೊಂದು ವರ್ಷದ ಚೀನಾದ ಡಿಂಗ್ ಲಿರೆನ್ ನಡುವೆ ವಿಶ್ವ ಚೆಸ್ ಚಾಂಪಿಯನ್ ಪಟ್ಟಕ್ಕಾಗಿ ಪೈಪೋಟಿ ನಡೆಯಲಿದೆ. ಹದಿನಾಲ್ಕು ಸುತ್ತುಗಳ ಈ ಪಂದ್ಯಾವಳಿ ಇದೇ ವರ್ಷದ ನವೆಂಬರ್ - ಡಿಸೆಂಬರ್‌ನಲ್ಲಿ ನಡೆಯುತ್ತದೆಂದು ಹೇಳಲಾಗಿದೆ. ಆದರೆ ಈವರೆಗೂ ಸ್ಪರ್ಧೆ ನಡೆಯುವ ಸ್ಥಳ ಹಾಗೂ ದಿನಾಂಕವನ್ನು 'ಫಿಡೆ' ಸ್ಪಷ್ಟಪಡಿಸಿಲ್ಲ.**